ಇಡೀ ರಾಜ್ಯದ ಮೂಲೆ ಮೂಲೆಗಳಿಗೆ ಎಲ್ಲಾ ಪ್ರದೇಶಕ್ಕೆ ಸಕ್ಕರೆಯನ್ನು ತಲುಪಿಸುವ ವ್ಯವಸ್ಥೆ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

3) ಸಾಲ ವಸೂಲಿಗಾಗಿ ರೈತರ ಜಮೀನು ಹರಾಜು ಮಾಡುತ್ತಿರುವುದು

ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ): ಅಧ್ಯಕ್ಷರೇ, ರೈತರ ಸಾಲದ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಬಹಳ ಸ್ಪಷ್ಟವಾಗಿ ತಿಳಿಸಿದ್ದಾರೆ. ಮಾರ್ಚ್ 31ನೇ ತಾರೀಖಿನವರೆಗೆ ಸಾಲ ವಸೂಲಿ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಬಂಗಾರುಪೇಟೆ ತಾಲ್ಲೂಕಿನಲ್ಲಿ ಉದ್ದೇಶಪೂರ್ವಕವಾಗಿ 4.3.91 ರಂದು 7 ಜನ ರೈತರ ಜಮೀನನ್ನು ಹರಾಜು ಮಾಡಿ, ಜಿಲ್ಲಾಧಿಕಾರಿಗಳ ಹೆಸರಿನಲ್ಲಿ ಸ್ಥಿರೀಕರಿಸಿ ಆ ದುಡ್ಡನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಅಂತಹ ಅಧಿಕಾರಿಗಳ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ. ಏಕೆಂದರೆ ಈ ಬಗ್ಗೆ ಸರಕಾರ ಸ್ಪಷ್ಟವಾಗಿ ನಿರ್ದಿಷ್ಟವಾಗಿ ತಿಳಿಸಿದ್ದರೂ ಸಹ ಆ ಅಧಿಕಾರಿಗಳು ತಮ್ಮ ಆದೇಶವನ್ನು ಉಲ್ಲಂಘನೆ ಮಾಡಿದ್ದಾರೆ. ಸರಕಾರಕ್ಕೆ ಕೆಟ್ಟ ಹೆಸರನ್ನು ತರತಕ್ಕಂಥ ವ್ಯವಸ್ಥೆ ಮಾಡಿರುತ್ತಾರೆ. ಇಡೀ ತಾಲ್ಲೂಕಿನಲ್ಲಿ ಕೇವಲ 7 ಜನ ರೈತರ ಜಮೀನು ಹರಾಜು ಮಾಡಿದ್ದಾರೆ. ಅಂತಹ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ. ಹರಾಜು ಮಾಡಿರತಕ್ಕ ಜಮೀನನ್ನು ಏನು ಮಾಡುತ್ತೀರಿ ಎಂದು ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಬೇಕೆಂದು ತಮ್ಮ ಮೂಲಕ ಮನವಿ ಮಾಡುತ್ತೇನೆ.

4) ಪಂಪುಸೆಟ್‌ಗಳಿಗೆ ವಿದ್ಯುಚ್ಛಕ್ತಿ ಒದಗಿಸುವುದು.

ಶ್ರೀ ಹರ್ಷಕುಮಾರ್ ಗೌಡ (ಚಾಮರಾಜ) : ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ತಮ್ಮ ಮೂಲಕ ಒಂದು ಮನವಿಯನ್ನು ಸಲ್ಲಿಸಿದ್ದೇನೆ. ಗ್ರಾಮಾಂತರ ಪ್ರದೇಶಗಳಲ್ಲಿ 60ಸಾವಿರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಆದರೆ ವಿದ್ಯುತ್ ಮಂಡಳಿಯವರು ಒಂದು ಕಂಬಕ್ಕೆ ಐದು ನೂರು ರೂಪಾಯಿ ಲಂಚ ಕೇಳುತ್ತಿದ್ದಾರೆ. 6 ಕಂಬ ಇದ್ದರೆ, ಮೂರು ಸಾವಿರ, ಮೂರು ಕಂಬ ಇದ್ದರೆ ಒಂದೂವರೆ ಸಾವಿರ ಲಂಚ ಕೇಳುವ ಮೂಲಕ ರೈತರನ್ನು ಶೋಷಣೆ ಮಾಡುತ್ತಿದ್ದಾರೆ. ಇದನ್ನು ತಪ್ಪಿಸುವುದಕ್ಕೆ ಮುಖ್ಯಮಂತ್ರಿಯವರು ದಯವಿಟ್ಟು ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡಿದ್ದೇನೆ. ತಾವು ಈ ಬಗ್ಗೆ ಆದೇಶ ನೀಡಬೇಕು.

5) ಪಾಮೋಲಿನ್ ಎಣ್ಣೆಯನ್ನು ಗ್ರಾಮಾಂತರ ಪ್ರದೇಶಗಳಿಗೆ ಸರಬರಾಜು ಮಾಡುವುದು.

ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡದೇವನ ಕೋಟೆ) : ಮಾನ್ಯ ಅಧ್ಯಕ್ಷರೇ, ಪಾಮೋಲಿನ ಎಣ್ಣೆ ಕೇವಲ ನಗರ ಪ್ರದೇಶಕ್ಕೆ ಮಾತ್ರ ಸರಬರಾಜಾಗುತ್ತಿದೆ. 5.6 ತಿಂಗಳಿಂದ ಗ್ರಾಮಾಂತರ ಪ್ರದೇಶಕ್ಕೆ ಸರಬರಾಜಾಗುತ್ತಿಲ್ಲ. ಗ್ರಾಮಾಂತರ ಪ್ರದೇಶದ ಜನಗಳಿಗೆ ಪಾಮೋಲಿನ್ ಎಣ್ಣೆ ಬರುತ್ತದೆ ಎಂಬುದು ಗೊತ್ತಾಗುತ್ತಿಲ್ಲ. ಎಲ್ಲಾ ಪಾಮೋಲಿನ್ ಎಣ್ಣೆ ನಗರ ಪ್ರದೇಶಕ್ಕೇ ಸರಬರಾಜಾಗುತ್ತಿದ್ದು, ಗ್ರಾಮಾಂತರ ಪ್ರದೇಶಕ್ಕೆ ಸರಬರಾಜಾಗುತ್ತಿಲ್ಲ. ಕೂಡಲೇ ಗ್ರಾಮಾಂತರ ಪ್ರದೇಶಕ್ಕೂ ಇದನ್ನು ಸರಬರಾಜು ಮಾಡಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಪಾಮೋಲಿನ್ ಸಕ್ಕರೆ, ಎಣ್ಣೆ ಸಾಲ ವಸೂಲಿ ಎಲ್ಲಾ ಒಂದಕ್ಕೊಂದಕ್ಕೆ ಮಿಸ್ಸ್ ಆಗಿ ಕನ್‌ಫ್ಯೂಸ್ ಆಗುವುದು ಬೇಡ. ಸಕ್ಕರೆ, ಪಾಮೋಲಿನ್ ಎಣ್ಣೇದು ಒಂದು ಕಡೆ ಹೇಳಿ, ಸಾಲ ವಸೂಲಾದ ಮೇಲೆ ಹೇಳಿ. ಸಕ್ಕರೆ, ಸಾಲ ವಸೂಲಿ ಎಲ್ಲಾ ಒಂದೇ ಕಡೆ ಸೇರಿಸಿಬಿಟ್ಟು ತೊಂದರೆಯಾಗುವುದು ಬೇಡ.

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) : ಯಾವ ವಸೂಲಿ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಕೋಲಾರದಲ್ಲಿ ರೈತರ ಜಮೀನು ಹರಾಜು ಮಾಡಿದ್ದಾರೆ. ಒಂದು ಕಡೆ ಸಕ್ಕರೆ ಇಲ್ಲ, ಇನ್ನೊಂದು ಕಡೆ ಸಾಲ ವಸೂಲಿ ಮಾಡುವುದಿಲ್ಲ ಎಂದು ಹೇಳಿದ್ದೀರಿ ಆದರೂ ಜಮೀನು ಹರಾಜು ಮಾಡಿರುತ್ತಾರೆ. ಒಂದು ಕಡೆ ಸಕ್ಕರೆ ಇಲ್ಲ, ಪಾಮೋಲಿನ್ ಆಯಿಲ್ ಇಲ್ಲ, ಎರಡನ್ನೂ ಬೇರೆ ಬೇರೆ ಹೇಳಿ ಎಂದು ಹೇಳಿದೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಯವರು): ಮಾನ್ಯ ಸಭಾಧ್ಯಕ್ಷರೇ ಮಾನ್ಯ ವಿರೋಧ ಪಕ್ಷದ ಉಪನಾಯಕರಾದ ಶ್ರೀ ಸಿಂಧ್ಯಾರವರು ಎತ್ತಿರತಕ್ಕಂಥಾ ವಿಚಾರಕ್ಕೆ ವಾಟಾಳ್ನಾಗರಾಜ್ರವರು ಪ್ರೆಸ್ಅಪ್ಪಾಡಿರತಕ್ಕದ್ದು. ಗುರುಪಾದಪ್ಪನವರು ಧ್ವನಿಗೂಡಿಸರತಕ್ಕದ್ದು ಒಂದೇ ವಿಚಾರ. ಅದೇ ರೀತಿ ವೆಂಕಟೇಶ್ರವರೂ ಹೇಳಿದ್ದಾರೆ. ಅದು ಪಾಮೊಲೀನ್ ಆಯಿಲ್ ಇರಬಹುದು, ಸಕ್ಕರೆ ಇರಬಹುದು ಅಥವಾ ಮತ್ತೊಂದು ಆಹಾರಧಾನ್ಯದ ವಿಚಾರ ಇರಬಹುದು, ಇದೆಲ್ಲಾ ಎಸೆನ್ಷಿಯಲ್ ಕಮೂಡಿಟೀಸ್. ಅದೂ ಕೂಡಾ ಯುಗಾದಿ ಹಬ್ಬ ಬಂದಾಗ ಇವೆಲ್ಲಾ ಹೆಚ್ಚು ಖರ್ಜಾಗತಕ್ಕಂಥ ಅಗತ್ಯ ವಸ್ತುಗಳು. ಈ ವಿಚಾರದಲ್ಲಿ ಮಾನ್ಯ ಆಹಾರ ಮಂತ್ರಿಗಳು ಗೋಧಿ ಕೊಡುತ್ತೇವೆಂದು ಹೇಳಿಕೆ ಕೊಟ್ಟಾಗ, ಆದರೆ ಅದು ತಿನ್ನುವುದಕ್ಕೆ ಯೋಗ್ಯ ಅಗಿಲ್ಲ ಎಂಬ ಅಭಿಪ್ರಾಯ ತಾವು ಕೊಟ್ಟಿದ್ದೀರಿ. ಇದಕ್ಕೆ ನಾನು ಇವತ್ತೇ ಗಮನ ಕೊಡಬೇಕೆಂದು ಒತ್ತಡ ತಂದಿದ್ದೀರಿ. ನೀವು ಒತ್ತಡ ತಂದಿದ್ದೀರಿ ಎನ್ನತಕ್ಕಂಥ ದೃಷ್ಟಿ ಒಂದಾದರೆ, ಇದರಲ್ಲಿ ಸರಕಾರದ ಅದ್ಯ ಕರ್ತವ್ಯ ಕೂಡಾ ಇವೆ. ಈ ವಿಚಾರದಲ್ಲಿ ಹಬ್ಬ ಬಂದಿದೇ ಎಂಬ ಒಂದೇ ಕಾರಣ ಅಲ್ಲ, ಹಬ್ಬ ಇಲ್ಲದಿದ್ದರೂ ಕೂಡಾ ಒದಗಿಸಲೇ ಬೇಕಲ್ಲ, ಅದನ್ನು ಒದಗಿಸತಕ್ಕಂಥ ವಿಚಾರ ಇದೆ. ಮಾರ್ಚ್ ತಿಂಗಳದ್ದು ಇನ್ನೂ ಬಂದಿಲ್ಲ ಎಂದರೆ ಜನರಿಗೆ ತೊಂದರೆಯಾಗಿದೆ ಎಂಬ ಅಭಿಪ್ರಾಯ ಬರುತ್ತದೆ. ಕೂಡಲೇ ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡು, ಪಾಮೊಲೀನ್, ಸಕ್ಕರೆ ಹಾಗೂ ಬೇರೆ ವಸ್ತುಗಳು ಕೂಡಾ ಕೊರತೆ ಬಿದ್ದರೆ ಅದರ ಬಗ್ಗೆ ಕಾರ್ಯಕ್ರಮ ಹಾಕುವುದಕ್ಕೆ ಇವತ್ತೇ ಆಹಾರ ಸಚಿವರ ಹತ್ತಿರ ಮಾತನ್ನಾಡುತ್ತೇನೆ, ಮತ್ತು ಅಧಿಕಾರಿಗಳಿಗೂ ಕೂಡಾ ತಿಳಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ನಾಡಿದ್ದೇ ಹಬ್ಬ.

ಶ್ರೀ ಎಸ್. ಬಂಗಾರಪ್ಪ: ಅದಕ್ಕಾಗಿ ಇವತ್ತೇ ಎಂದು ಹೇಳಿರುತ್ತೇನೆ. ನಿನ್ನೆ ಮಾಡುತ್ತೇನೆ ಎಂದರೆ ನಿಮಗೆ ಏನು ನಂಬಿಕೆ ಬರುತ್ತದೆ.

ಆಮೇಲೆ ಮತ್ತೊಂದು ವಿಚಾರವನ್ನು ಮಾನ್ಯ ಸದಸ್ಯರು ಎತ್ತಿದರು. ಅದು ರೈತರ ಸಾಲ ವಸೂಲಾತಿ ವಿಚಾರ ಈ ವಿಚಾರದ ಬಗ್ಗೆ ನಾವು ಪದೇ ಪದೇ ಹೇಳಿದ್ದೇವೆ ಮತ್ತು ನನ್ನ ಬಜೆಟ್ ಭಾಷಣದಲ್ಲಿ ಕೂಡ ತಿಳಿಸಿದ್ದೇನೆ. ಆದರೆ ಇದರ ಬಗ್ಗೆ ತಮಗೆ ತಿಳಿದಿರುವಂತೆ ಕೆಲವು ನಿಬಂಧನೆಗಳು ಇವೆ. ಅದೇನೆಂದರೆ 10 ಸಾವಿರ ರೂಪಾಯಿಗಳಿಂತ ಮೇಲೆ ಇರುವಂತಹ ಸಾಲವನ್ನು ವಸೂಲಿ ಮಾಡುವ ಅವಕಾಶ ಇದೆ. ದಯಮಾಡಿ ತಾವ್ಯಾರು ಇದನ್ನು ಮರೆಯಬೇಡಿ. ಮರೆತರೆ ಅದು ತಪ್ಪಾಗುತ್ತದೆ.

ಶ್ರೀ ಎಂ. ನಾರಾಯಣಸ್ವಾಮಿ : ಅದನ್ನು 8 ಸಾವಿರ ರೂಪಾಯಿ ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ: ನನಗೆ ಅದನ್ನು ಕಳುಹಿಸಿಕೊಡಿ. ಅಂತಾದ್ದನ್ನು ಮಾಡಿದ್ದರೆ ಅದು ತಪ್ಪಾಗುತ್ತದೆ. ಇನೊಂದು ವಿಚಾರ ಏನೆಂದರೆ ಕೇಂದ್ರ ಸರ್ಕಾರ ಮೊನ್ನೆ ತೆಗೆದುಕೊಂಡ ಆಕೌಂಟ್ನಲ್ಲಿಈ ಬಾಬತ್ತಿಗೆ 1500 ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದ್ದಾರೆಂದು ನಾವೆಲ್ಲ ಪತ್ರಿಕೆಗಳಲ್ಲಿ ಓದಿದ್ದೇವೆ.

Vote on Account - Rs.1500 crores in respect of loans under Co-operative Sector.

ತಮಗೆಲ್ಲಾ ಗೊತ್ತಿರುವ ಹಾಗೆ ನಾವು ಎಲ್ಲಿರಿಗೂ ಈ ಬಗ್ಗೆ ಆದೇಶವನ್ನು ಕಳುಹಿಸಿಕೊಡುತ್ತಿದ್ದೇವೆ. ಅದೇನೆಂದರೆ ವಸೂಲಾತಿ ಕ್ರಮವನ್ನು 10 ಸಾವಿರ ರೂಪಾಯಿಗಳ ಒಳಗೆ ಇದ್ದರೆ ಅಂತಾದ್ದನ್ನು ನಿಲ್ಲಿಸಿ ಎಂದು ಇದರಿಂದ ಆ ಜನಗಳಿಗೆ ಏನಾದರೂ ತೊಂದರೆ ಆಗುಬಹುದೇನೋ ಎನ್ನುವ ದಿಸೆಯಲ್ಲಿ ನಾನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಅದು ಪತ್ರಿಕೆಗಳ ಮುಖಾಂತರ ರೇಡಿಯೋ ಮುಖಾಂತರ ಮತ್ತು ಟೆಲಿವಿಜನ್ ಮುಖಾಂತರ ಈ ಜನಗಳಿಗೆ ಗೊತ್ತಾಗಲಿ ಎನ್ನುವ ದೃಷ್ಟಿಯಿಂದ ನಾನು ನೇರವಾಗಿ ಹೇಳಿದ್ದೇನೆ. ಮತ್ತು ನನ್ನ ಬಜೆಟ್ ಭಾಷಣದಲ್ಲಿ ಸಹ ಸ್ಪಷ್ಟಪಡಿಸಿದ್ದೇನೆ. ಆದರೂ ಮಾನ್ಯ ಸದಸ್ಯರು ಈಗ ಹರಾಜು ಆಗಿರುವ ಜಮೀನನ್ನು ಏನು ಮಾಡುತ್ತೀರಿ ಎಂದು ಕೇಳಿದ್ದಾರೆ. ಇವತ್ತು ಜಮೀನು ಹರಾಜಾದರೆ

under Section 101(c) of co-operative Societies Act

ಜಿಲ್ಲಾಧಿಕಾರಿಗಳು ತೆಗೆದುಕೊಂಡಿದ್ದರೆ ಅಥವಾ ಖಾಸಗಿಯವರು ತೆಗೆದುಕೊಂಡಿದ್ದರೆ ಅದು ಇಲ್ಲೀಗಲ್ ಆಗುತ್ತದೆ. ಆ ಜಮೀನನ್ನು ಆ ರೈತರಿಗೇ ಹಿಂದಕ್ಕೆ ಕೊಡಿಸೋಣ. ಇದರ ಬಗ್ಗೆ ತಮಗೆ ಅನುಮಾನ ಬೇಡ. We have got second thought over Section 101(c) of the Co-operative Societies Act.

ಏಕೆಂದರೆ ಈ ಕಾಲಂ ಒಳ್ಳೆಯದಲ್ಲವೆಂಬ ಅಭಿಪ್ರಾಯವನ್ನು ನಾವು ಹೊಂದಿದ್ದೇವೆ. ಆ ಕಲಂನ್ನು ಬದಲಾವಣೆ ಮಾಡುವ ಹಿನ್ನೆಲೆಯಲ್ಲಿ ಸಹ ನಾವು ಇದ್ದೇವೆ. ಈ ಬಗ್ಗೆ ತೀವ್ರವಾಗಿ ಪರಿಶೀಲನೆಯನ್ನು ಮಾಡುತ್ತಿದ್ದೇವೆ. ಆದರೆ ಯಾವ ರೈತರು 10 ಸಾವಿರ ರೂಪಾಯಿಗಳಿಂತ ಕಡಿಮೆ ಸಾಲ ಇದು ಅಂತಹ ರೈತರ ಜಮೀನನು ಹರಾಜು ಫಲೈಪೆ ಮುಂಕಾಗ್ಗು ಮಾಡಿದ್ದರೆ ಅದನ್ನು ವಜಾ ಮಾಡಿ ಆ ಜಮೀನನ್ನು ಹಿಂದಕ್ಕೆ ಕೊಡಿಸುತ್ತೇವೆ. ಇದರ ಬಗ್ಗೆ ಅನುಮಾನ ಬೇಡ. ಆದರೆ 10 ಸಾವಿರ ರೂಪಾಯಿಗಳಿಗಿಂತ ಮೇಲ್ಪಟ್ಟು ಸಾಲ ಇದ್ದರೆ ಆ ಬಗ್ಗೆ ನಾವ್ಯಾರು ತಕರಾರು ಮಾಡುವಂತಿಲ್ಲ. ಆ ಒಂದು ನೀತಿಯನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಒಪ್ಪಿರತಕ್ಕಂಥ ರೀತಿ ಪ್ರಶ್ನೆ ಮೇಲೆ ನಿಂತಿದೆ. ಇನ್ನು ಮಾನ್ಯ ಸದಸ್ಯರಾದ ಹರ್ಷಕುಮಾರ್ ಗೌಡರು ಒಂದು ಕಂಬಕ್ಕೆ 500 ರೂಪಾಯಿಗಳಿಂದ, ಒಂದು ಸಾವಿರ ರೂಪಾಯಿಗಳವರೆಗೆ ಲಂಚ ಕೇಳುತ್ತಿದ್ದಾರೆಂದು ಜನರಲ್ ಆಗಿ ಹೇಳಿದ್ದಾರೆ. ಇದರಿಂದ ಜನಗಳಿಗೆ ಏನು ಒಂದು ಅಭಿಪ್ರಾಯ ಬರುತ್ತದೆ. ಅಂದರೆ ಕಂಬಗಳನ್ನು ಹಾಕಿರುವ ಎಲ್ಲಾ ಕಡೆ ಲಂಚ ನಡೆಯುತ್ತಿದೆ ಎನ್ನುವ ಒಂದು ಅಭಿಪ್ರಾಯ ನಮಗೆ ಬರುವುದು ಬೇಡ. ನಮ್ಮ ಟಾರ್‌ಗೇಟ್ ಇದ್ದದ್ದು 40 ಸಾವಿರ, ಆದರೆ, ಅದು ಇವತ್ತು 60 ಸಾವಿರ ಟಾರ್ ಗೇಟಿಗೆ ಹೋಗುತ್ತಿದ್ದೇವೆ. ಈಗಾಗಲೇ ಸುಮಾರು 57-58 ಸಾವಿರಕ್ಕೆ ನಾವು ಮುಟ್ಟಿದ್ದೇವೆ. ಇದು ಈ ತಿಂಗಳಲ್ಲಿಯೇ 60 ಸಾವಿರಕ್ಕೂ ಮೇಲ್ಪಟ್ಟು ಹೋಗಬೇಕೆಂದು ನಾನು ಆದೇಶ ಬಹಳ ಸ್ಟ್ರಿಕ್ಟ್ ಆಗಿ ಆ ಇಲಾಖೆಗೆ ಕೊಟ್ಟಿದ್ದೇನೆ. ಈ ಸಂದರ್ಭದಲ್ಲಿ ನಮ್ಮ ಅಧಿಕಾರಿಗಳು ಬಹಳ ಸ್ಪೀಡ್ ನಲ್ಲಿ ಕೆಲಸ ಮಾಡುತ್ತಿದ್ದಾರೆ. ಎಲ್ಲೋ ಒಂದು ಕಡೆ ತಾವು ಹೇಳಿದ ಹಾಗೆ ಇರಬಹುದು, There may be some lapses. ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಜನರಲ್ ಆಗಿ ಹೇಳಿದರೆ ಏನಾಗುತ್ತದೆ? ಒಳ್ಳೆಯ ಕೆಲಸ ಮಾಡತಕ್ಕಂಥ ಅಧಿಕಾರಿಗಳ ಮನಸ್ಸಿನ ಮೇಲೆ ಕೆಟ್ಟ ಪರಿಣಾಮವುಂಟಾಗುತ್ತದೆ. ಆದ್ದರಿಂದ ಎಲ್ಲಿ ಆ ರೀತಿ ನಡೆದಿದೆ ಆ ಬಗ್ಗೆ ನನಗೆ ಪತ್ರ ಬರೆದುಕಳುಹಿಸಿ ಕೊಡಿ, ನಾನು ಆ ಬಗ್ಗೆ ವಿಚಾರಣೆ ಮಾಡಿ ಕಾರ್ಯಕ್ರಮ ಹಾಕಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ. ತಾವು ನಿನ್ನೆ ದಿವಸ ಸರ್ಕಾರಕ್ಕೆ ಒಂದು ಆದೇಶ ಕೊಟ್ಟಿದ್ದೀರಿ, ಏನೆಂದರೆ ಈ ರಾಜ್ಯದಲ್ಲಿ ನಡೆಯುತ್ತಿರತಕ್ಕಂಥ ದರೋಡೆಗಳ ಬಗ್ಗೆ ಸರ್ಕಾರ ಒಂದು ಹೇಳಿಕೆ ಕೊಡಬೇಕೆಂದು, ಅದು ಏನಾಯಿತು?

ಅಧ್ಯಕ್ಷರು : ಸೋಮವಾರ ಕೊಡುತ್ತಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ 10 ಸಾವಿರ ರೂಪಾಯಿಗಳಿಗಿಂತ ಕಡಿಮೆ ಇರುವ ರೈತರ ಸಾಲ ವಸೂಲಿ ಮಾಡುವುದು ಬೇಡ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಆದರೆ ನಾನು ಒಂದು ಬ್ಯಾಂಕಿನ ಅಧ್ಯಕ್ಷನಾಗಿ ಹೇಳುತ್ತಿದ್ದೇನೆ. ಇದುವರೆಗೂ ಸರ್ಕಾರದಿಂದ ಅಂತಹ ಒಂದು ಆದೇಶ ನಮಗೆ ಬಂದಿಲ್ಲ. ತಾವು ಆದೇಶ ಕೊಟ್ಟರೆ ಯಾರೂ ವಸೂಲಿ ಮಾಡುವುದಿಲ್ಲ. ಇಲ್ಲದಿದ್ದರೆ ನಮಗೆ ಆದೇಶ ಬಂದಿಲ್ಲ ಎಂದು ಅವರು ಸಾಲ ವಸೂಲಿ ಮಾಡುತ್ತಾರೆ. ತಾವು ಒಂದು ಆದೇಶವನ್ನು ಲಿಖಿತವಾಗಿ ಕಳುಹಿಸಿ ಕೊಡಿ. ಲಿಖಿತ ಆದೇಶವಿಲ್ಲದಿದ್ದರೆ ಏನೂ ಉಪಯೋಗವಾಗುವುದಿಲ್ಲ.

ಶ್ರೀ ಎಸ್.ಬಂಗಾರಪ್ಪ : ನನ್ನ ಉತ್ತರವನ್ನು ತಾವು ಪೂರ್ತಿ ಕೇಳಲಿಲ್ಲ, ಕೇಂದ್ರ ಸರ್ಕಾರದಿಂದ ನಮಗೆ ಆದೇಶ ಬಂದಿದೆ ಮತ್ತು ನಾನು ನನ್ನ ಬಜೆಟ್ ಭಾಷಣದಲ್ಲಿ ಸಹ ಸ್ಪಷ್ಟಪಡಿಸಿದ್ದೇನೆ. ಆ ಪ್ರಕಾರ ನಾವು ಆದೇಶ ಕಳುಹಿಸಿ ಕೊಡುತ್ತೇವೆ. ನೀವು ನಾನು ಹೇಳುವುದನ್ನು ಸರಿಯಾಗಿ ಕೇಳದೆ ವಾಟಾಳ ನಾಗರಾಜ್ ರವರ ಹತ್ತಿರ ಮಾತನಾಡಿಕೊಂಡು ಇದ್ದರೆ ಹೇಗೆ ತಿಳಿಯುತ್ತದೆ?

ಶ್ರೀ ವಾಟಾಳ ನಾಗರಾಜ್ : ಮಾನ್ಯ ಅಧ್ಯಕ್ಷರೇ ಇದು ಸತ್ಯಕ್ಕೆ ದೂರವಾದ ಮಾತು. ನಾನು ನಿಮ್ಮ ಮಾತನ್ನು ಕೇಳುತ್ತಿದ್ದೇನೆ. ಆದರೂ ಈ ರೀತಿ ಹೇಳಿದರೆ ಹೇಗೆ?

11.05 ಎ.ಎಂ

ಉಪಾಧ್ಯಕ್ಷರಾದ ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಗಮನ ಸೆಳೆಯುವ ಸೂಚನೆ

ಬೆಂಗಳೂರು ಅರಣ್ಯ ಭವನದಲ್ಲಿದ್ದ ಲಕ್ಷಾಂತರ ರೂ. ಮೌಲ್ಯದ ಆನೆಯ 2 ಬೃಹತ್ ದಂತಗಳು ಕಣ್ಮರೆಯಾಗಿರುವುದು.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ (ಸಂಕೇಶ್ವರ್) : ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಅರಣ್ಯ ಭವನದಲ್ಲಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ಆನೆಯ ಎರಡು ಬೃಹತ್ ದಂತಗಳು ಕಣ್ಮರೆಯಾಗಿರುವ ಬಗ್ಗೆ ಅರಣ್ಯ ರಾಜ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಈ. ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೇ, 11-3-1991 ರಿಂದ ಬೆಂಗಳೂರು ಅರಣ್ಯ ಭವನದಲ್ಲಿರುವ 1ನೇ ಮಹಡಿಯಲ್ಲಿರುವ ಬೆಂಗಳೂರು ವೃತ್ತ ಅರಣ್ಯ ಸಂರಕ್ಷಣಾಧಿಕಾರಿಯವರ ಕೊಠಡಿಯಲ್ಲಿದ್ದ ಎರಡು ದಂತಗಳು ಕಳುವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಸದರಿ ಆನೆಯ ದಂತಗಳನ್ನು ಕೆತ್ತನೆ ಮಾಡಿದ್ದು ಒಂದು ಮರದ ಅಟ್ಟಣಿಗೆಯ(ಪ್ಲಾಟ್ ಫಾರಂ) ಮೇಲೆ ನಿಲ್ಲಿಸಿಡಲಾಗಿತ್ತು. ಕಳುವಾದ ಆನೆಯ ದಂತಗಳ ಮೌಲ್ಯ ಅಂದಾಜು ರೂ.35,000-00(ರೂಪಾಯಿಗಳು) ಮೂವತ್ತೈದು ಸಾವಿರ ಮಾತ್ರ) ಇರುತ್ತದೆ. ಈ ದಂತಗಳ ಹಾಗೂ ಒಂದು ತುರ್ತು ದೀಪದ (Emergency lamp). ಕಳ್ಳತನದ ಬಗ್ಗೆ